

ಡಾ.ವಿನೋದ ಛೆಬ್ಬಿ

**ಪುರುಷ ಪ್ರಧಾನ ವ್ಯವಸ್ಥೆಯ ಪ್ರತೀಕವು ಶಿಶ್ನದ ಆಕಾರದಲ್ಲೂ ಎದ್ದುಕಾಣುತ್ತದೆ!**

# 112: ವ್ಯವಸ್ಥೆಯ ಬಲಿಪಶು–3

ಪುರುಷತ್ವದ ಪಾರಮ್ಯದಿಂದ ಒಲ್ಲದ ಹೆಣ್ಣನ್ನು ವಶಪಡಿಸಿಕೊಳ್ಳಲು ಹೊರಟ ಯುವಕನ ಬಗೆಗೆ ಮಾತಾಡುತ್ತಿದ್ದೇವೆ. ಅದಕ್ಕೆಂದೇ ಅವನು ಶಿಶ್ನದ ಗಡಸುತನವನ್ನು ಹೆಚ್ಚಿಸಿಕೊಳ್ಳಲು ತವಕಿಸುತ್ತಿದ್ದಾನೆ ಎಂದು ಗೊತ್ತಾಗಿದೆ.

ಯುವಕನ ಯತ್ನದ ಹಿಂದಿರುವ ರೋಷದ ಮೂಲ ಎಲ್ಲಿ ಎಂದು ಯೋಚಿಸಿದೆ. ಸಂಗಾತಿಯು ಕಾಮಕೂಟದಲ್ಲಿ ಒಳಗೊಳ್ಳಲು ನಿರಾಕರಿಸಿದರೆ ನಿರಾಸೆ, ಬೇಸರ ಆಗುತ್ತದೆ. ಸಿಟ್ಟೂ ಬರುತ್ತದೆ. ಆದರೆ ರೋಷ? ಯುವಕನೇನೂ ವಿಕೃತ ಕಾಮಿ ಅಥವಾ ಸೇಡು ಸಾಧಿಸುವವನೆಂದು ನನಗೆ ಅನ್ನಿಸಲಿಲ್ಲ. ಅಷ್ಟಲ್ಲದೆ ಇವನು ಹೆಂಡತಿಯ ಜೊತೆ ಒರಟಾಗಿ ವರ್ತಿಸಿಲ್ಲ, ಜಗಳವಾಡಿಲ್ಲ. ಹಾಗಾಗಿ ಇವನ ರೋಷವು ಹೆಂಡತಿಯ ವಿರುದ್ಧವಾಗಿಲ್ಲ ವಿನಾ ವ್ಯವಸ್ಥೆಯ ವಿರುದ್ಧವಾಗಿದೆ! ಇದು ಹೇಗೆಂದರೆ, ಹುಡುಗ–ಹುಡುಗಿ ಜೊತೆಯಾಗಿ ಸಾಕಷ್ಟು ಓಡಾಡಿ, ವ್ಯವಹರಿಸಿ, ನಂತರ ಆಯ್ಕೆಮಾಡಲು ಅವರ ವ್ಯವಸ್ಥೆಯಲ್ಲಿ ಅನುಮತಿಯಿಲ್ಲ. ಅತ್ತ ಹುಡುಗಿಯ ಕಡೆಯೂ ಅಷ್ಟೆ. ಆಕೆಯು ಮದುವೆ ತಪ್ಪಿಸಲಾಗದು ಅನ್ನಿಸುವ ತನಕವೂ ಪ್ರೇಮಿಯ ಬಗೆಗೆ ಬಾಯಿಬಿಟ್ಟಿಲ್ಲ. ತಡೆಯಲಾರೆ ಎನ್ನಿಸಿದಾಗ – ತಾಯ್ತಂದೆಯನ್ನು ಬಿಟ್ಟು – ಚಿಕ್ಕಮ್ಮನ ಮುಂದೆ ಹೇಳಿದ್ದಾಳೆ. ಅಷ್ಟಾದರೂ ಅವಳನ್ನು ಕಡೆಗಣಿಸಲಾಗಿದೆ. ಇದೆಲ್ಲ ಗಮನಿಸಿದರೆ, ಆಕೆಯ ಇವನಿಗಿಂತ ಹೆಚ್ಚಾಗಿ ವ್ಯವಸ್ಥೆಯ ಕೈಗೊಂಬೆಯಾಗಿ, ತನ್ನ ಆತ್ಮಗೌರವಕ್ಕೆ ಬೆಲೆಕೊಡದೆ ಹಿರಿಯರ ಆಣತಿಗೆ ಒಪ್ಪಿಸಿಕೊಂಡಿದ್ದಾಳೆ. ನತದೃಷ್ಟೆ, ಅವಳದೇನೂ ತಪ್ಪಿಲ್ಲ. ಇದನ್ನು ಯುವಕನಿಗೆ ಅರ್ಥಮಾಡಿಸುವುದು ಹೇಗೆ?

ಯುವಕನಿಗೆ ಕೇಳಿದೆ: 'ನಿಮ್ಮ ಹೆಂಡತಿ ಹೀಗೆ ವರ್ತಿಸಿದ್ದಾಳಲ್ಲ, ನಿಮಗೆ ಏನೆನ್ನಿಸುತ್ತದೆ?' ಹುಡುಗಿ ಮೋಸ ಮಾಡಿದ್ದಾಳೆ ಎಂದ. ಮುಂಚೆಯೇ ತಿಳಿಸಿದ್ದರೆ ಮದುವೆ ಆಗುತ್ತಲೇ ಇರಲಿಲ್ಲ ಎಂದ. ಅದು ನಿಜವೆ, ಆದರೆ, ಇವನೇ ಹುಡುಗಿಯ ಮನಸ್ಸಿನಲ್ಲಿ ಇನ್ನೊಬ್ಬರು ಇದ್ದಾರೆಯೇ ಎಂದು ಕೇಳಿದನೆ ಎಂದುದಕ್ಕೆ ಗಲಿಬಿಲಿಗೊಂಡ. ಆಕೆ ತನ್ನನ್ನು ಮದುವೆಯಾಗಲು ಒಪ್ಪಿದ್ದಾಳಲ್ಲವೆ, ಹಾಗಾಗಿ ಕೇಳುವ ಕಾರಣವಿಲ್ಲ ಎಂದು ಸಮಜಾಯಿಷಿ ಕೊಟ್ಟ. ಸಂಭಾಷಣೆ ದಡ ಮುಟ್ಟುತ್ತಿಲ್ಲ ಎಂದೆನಿಸಿದಾಗ ಒಂದು ಪ್ರಶ್ನೆ ಹಾಕಿದೆ: 'ಆಕೆಯೊಡನೆ ಫೋನಿನಲ್ಲಿ ಸುಮಾರು ಹೊತ್ತು ಮಾತಾಡಿದ್ದೀರಿ. ಲವ್, ಸೆಕ್ಸ್ ಬಗೆಗೆ ಮಾತಾಡಿದಾಗ ಆಕೆ ಉತ್ತರಿಸಲಿಲ್ಲ ಎಂದಿರಿ. ಇಂಥ ಸಂಭಾಷಣೆಯ ನಂತರ ನಿಮ್ಮ ಅಂತರಂಗದೊಳಗೆ ಏನು ಅನುಭವ ಆಗುತ್ತಿತ್ತು? ಯೋಚಿಸಿ ಹೇಳಿ.'

ಯುವಕ ಸುಮಾರು ಸಮಯ ತೆಗೆದುಕೊಂಡ. ನಂತರ ಹಂಚಿಕೊಂಡ. ಆಕೆಯೊಡನೆ ಪ್ರತಿಸಲ ಮಾತಾಡಿದ ನಂತರ ಅವನಿಗೆ ಅತೃಪ್ತಿ, ಅಸಮಾಧಾನ ಆಗುತ್ತಿತ್ತು. ಅರ್ಥವಾಗದ ಗೊಂದಲ ಆಗುತ್ತಿತ್ತು. ಬೇಡದ್ದನ್ನು ಎದುರಿಸಬೇಕಾದಾಗ ಆಗುವಂತೆ ಎದೆಯೊಳಗೆ ತಳಮಳ ಆಗುತ್ತಿತ್ತು. ಹೀಗಾಗುವುದನ್ನು ಆಕೆಯೊಡನೆ ಹಂಚಿಕೊಂಡನೆ? ಇಲ್ಲವೇ ಇಲ್ಲ. ಯಾಕಿಲ್ಲ? ಗಂಡಸಾದ ತಾನು ಹೀಗೆ ಅನುಭವಿಸುವುದೇ ಯೋಗ್ಯವಲ್ಲ ಎಂದು ಹೇಳಿಕೊಂಡನಂತೆ. ಅಂದರೆ, ಹುಡುಗಿಗೆ ಅನ್ನಿಸಿದಂತೆ ಹುಡುಗನಿಗೂ ಈ ಸಂಬಂಧದಲ್ಲಿ ಸುಖವಿಲ್ಲ ಎಂದು ಮುಂಚೆಯೇ ಅಂತರ್ಬೋಧೆ ಆದರೂ ನಿರ್ಲಕ್ಷಿಸಿದ್ದಾನೆ!

ಇದರರ್ಥ ಏನು? ಯುವಕನೂ ಅವನ ಹೆಂಡತಿಯಂತೆ ತನ್ನ ಸ್ವಂತ ಅನಿಸಿಕೆಗಳಿಗೆ ಬೆಲೆಕೊಡದೆ ವ್ಯವಸ್ಥೆಯ ಕೈಗೊಂಬೆಯಾಗಿದ್ದಾನೆ!

ಹೀಗೆ ಇಬ್ಬರೂ ಒಂದೇ ಬಲೆಯಲ್ಲಿ ಸಿಕ್ಕಿಬಿದ್ದು ಒದ್ದಾಡುತ್ತಿದ್ದು ಸಮಾನದುಃಖಿಗಳಾಗಿದ್ದಾರೆ ಎಂದು ಮನಗಾಣಿಸಿ ಕೊಟ್ಟಾಗ ಯುವಕನ ರೋಷ ಕಡಿಮೆಯಾಯಿತಷ್ಟೇ ಅಲ್ಲ, ಹೆಂಡತಿಯ ಬಗೆಗೆ ಸಹತಾಪವೂ ಮೂಡಿತು. ಪುರುಷತ್ವದ ಪಾರಮ್ಯದಿಂದ ಹೆಣ್ಣನ್ನು ಆಳುವ ಯತ್ನವೇ ವ್ಯರ್ಥ ಎಂಬುದು ಅವನ ಮನಸ್ಸಿಗೆ ನಾಟಿತು. ಮುಂದಿನ ನಡೆಯ ಬಗೆಗೆ ಸುದೀರ್ಘ ಚರ್ಚೆಯಾಯಿತು. ಯುವಕ ಬದಲಾಗಲೇಬೇಕು. ಶಿಶ್ನಕೇಂದ್ರಿತ ನಿಲುವಿನಿಂದ ಹೊರಬರುತ್ತ ತನ್ನ ಬುದ್ಧಿ–ವಿವೇಕ ಉಪಯೋಗಿಸಬೇಕು. ವ್ಯವಸ್ಥೆಗೆ ಅಂಟಿಕೊಂಡು ಸ್ವಂತಿಕೆಯನ್ನು ಬಲಿಗೊಡದೆ ಪ್ರತ್ಯೇಕಗೊಳ್ಳಲೇಬೇಕು. ಹೀಗೆಂದಾಗ ಅವನು ಹೆಚ್ಚಿನವರು ಆಡುವಂತೆಯೇ ಆಡಿದ: 'ನನ್ನ ಜನ, ನನ್ನ ಸಮಾಜ ಹೀಗಿರುವಾಗ ನಾನೇನು ಮಾಡಲು ಸಾಧ್ಯವಿದೆ?' ಅದಕ್ಕಾಗಿ ಮಹತ್ವದ ಪ್ರಶ್ನೆ ಕೇಳಿದೆ: ನಿಮ್ಮ ಜನ, ನಿಮ್ಮ ಸಮಾಜ ಹೀಗಿದ್ದರೂ ನಿಮ್ಮ ನೆಮ್ಮದಿಯನ್ನು ಪಡೆಯುವತ್ತ ಹೆಜ್ಜೆಯಿಡಲೇಬೇಕು ಎಂದಾದರೆ ಯಾವ ದಿಕ್ಕಿಗೆ ಹೆಜ್ಜೆಯಿಡುತ್ತೀರಿ?

ಈಗ ಯುವಕ ಸ್ವಯಂಶಕ್ತ ಪ್ರಬುದ್ಧನಂತೆ ಯೋಚಿಸಲು ಆರಂಭಿಸಿದ! ವ್ಯವಸ್ಥೆಯಲ್ಲಿದ್ದೂ ಪ್ರತ್ಯೇಕತೆಯನ್ನು ಕಾಪಾಡಿಕೊಳ್ಳುವುದರ ಬಗೆಗೆ ಸಾಕಷ್ಟು ಚರ್ಚೆಯ ನಂತರ ಘೋಷಿಸಿದ. 'ಹೆಂಡತಿಯ ಜೊತೆಗೆ ಮಾತಾಡಬೇಕು. ಆಕೆಯ ಇಷ್ಟಕ್ಕೆ ವಿರುದ್ಧವಾಗಿ ಆಕೆಯನ್ನು ಕೂಡಲು ಇಷ್ಟವಿಲ್ಲವೆಂದು ತಿಳಿಸಬೇಕು. ಈ ದಾಂಪತ್ಯ ಮುರಿಯುವುದೇ ಇಬ್ಬರಿಗೂ ಹಿತ. ವಿಚ್ಛೇದನದ ಬಳಿಕ ಆಕೆ ಅವಿವಾಹಿತಳಾಗುತ್ತಾಳೆ. ಆಗ ಪ್ರೇಮಿಯ ತಾಯ್ತಂದೆಯರು ಆಕೆಯನ್ನು ಒಪ್ಪಿಕೊಳ್ಳಬಹುದು.' ಅದಲ್ಲದೆ ಇನ್ನೊಂದು ಮಾತನ್ನೂ ಸೇರಿಸಿದ: 'ಪ್ರಸಂಗ ಬಂದರೆ ಪ್ರೇಮಿಯ ಬಗೆಗಿನ ಆಕೆಯ ನಿಷ್ಠೆಯನ್ನು ಎಲ್ಲರಿಗೂ ತಿಳಿಸುತ್ತೇನೆ' ಹೀಗೆ ಯುವಕನ ಪ್ರಕರಣ ಮುಕ್ತಾಯ ಕಂಡಿತು.

ನಿಮಗೆಲ್ಲ ಇಲ್ಲೊಂದು ಪ್ರಶ್ನೆ: ಹೆಂಡತಿಯು ಪ್ರೇಮಿಗೆ ಒಲಿದಿದ್ದಾಳೆ ಎಂದಾಗ ಯುವಕನೇಕೆ ಹಿಂದೆ ಸರಿಯಲಿಲ್ಲ? ಶಿಶ್ನದ ಬಲದಿಂದ ಗೆಲ್ಲುವ ಹುಂಬ ವಿಶ್ವಾಸ ಎಲ್ಲಿಂದ ಹುಟ್ಟಿತು? ಇದನ್ನು ಅರ್ಥೈಸಲು ಲಕ್ಷಗಟ್ಟಲೆ ವರ್ಷದ ಇತಿಹಾಸ ಕೆದಕಬೇಕು. ಆದಿಮಾನವನ ಕಾಲದಲ್ಲಿ ಮೇಲ್ಮೆಗಾಗಿ ಇಬ್ಬರು ಪುರುಷರ ನಡುವೆ ಕಾದಾಟ ನಡೆಯುತ್ತಿತ್ತಲ್ಲವೆ? ಸೋತವನ ಹೆಣ್ಣುಗಳು ಗೆದ್ದವನ ಆಸ್ತಿಯಾಗುತ್ತಿದ್ದರು. ಸಮರ್ಥ ಪೀಳಿಗೆ ಬೆಳೆಸುವುದೇ ಸೃಷ್ಟಿಯ ಉದ್ದೇಶವಾಗಿತ್ತು. ಇದನ್ನು ಕಾರ್ಯಗತಗೊಳಿಸಲು ಮಾನವನ ಶಿಶ್ನವು ರೂಪಾಂತರ ಹೊಂದುತ್ತ ಈಗಿರುವ ಆಕಾರ ಪಡೆದುಕೊಂಡಿದೆಯೆಂದು ಮಾನವಶಾಸ್ತ್ರಜ್ಞ ಗೋರ್ಡನ್ ಗ್ಯಾಲಪ್ ಹೇಳುತ್ತಾರೆ. ಇದನ್ನು ಸ್ಪಷ್ಟಮಾಡಿಕೊಳ್ಳಲು ಉದ್ರಿಕ್ತ ಶಿಶ್ನದ ಆಕಾರವನ್ನು ಗಮನಿಸಿ: ದಪ್ಪದಾದ ಮುಂಭಾಗದ ಮಣಿ, ಅದರ ಹಿಂದಿರುವ ಎತ್ತರದ ಕಿರೀಟ, ಹಾಗೂ ಕಿರೀಟದ ಹಿಂದಿನ ತಗ್ಗು ಯಾಕಿವೆ? ಸಂಭೋಗದಲ್ಲಿ ಶಿಶ್ನವನ್ನು ಹಿಂದೆ ಎಳೆದಾಗಲೆಲ್ಲ ಯೋನಿಯೊಳಗೆ (ಮುಂಚಿನ ಸಂಭೋಗದಿಂದ) ವೀರ್ಯವಿದ್ದರೆ ಕೆರೆಯಲ್ಪಟ್ಟು ಹೊರಬರುತ್ತದೆ; ನಂತರವೇ ಹೊಸ ವೀರ್ಯ ಬಿಡುಗಡೆಯಾಗುತ್ತದೆ. ಹಾಗೂ ಸ್ಖಲನದ ನಂತರ ಶಿಶ್ನವು ಮೆತ್ತಗಾಗುತ್ತ ನಂತರದ ಚಲನೆ ಅಸಾಧ್ಯವಾಗಿ ಹೊಸವೀರ್ಯವು ಅಲ್ಲಿಯೇ ಉಳಿಯುತ್ತದೆ! (ಪ್ರಯೋಗಶಾಲೆಯಲ್ಲಿ ಕಿರೀಟವಿರುವ ಹಾಗೂ ಕಿರೀಟವಿಲ್ಲದ ಶಿಶ್ನದ ಮಾದರಿಗಳನ್ನು ಉಪಯೋಗಿಸಿ ನೋಡಿದಾಗ ಈ ಸಿದ್ಧಾಂತಕ್ಕೆ ಪುಷ್ಟಿ ದೊರಕಿದೆ. ಅದಲ್ಲದೆ, ನವಯುವಕರು ತನ್ನ ಪ್ರೇಯಸಿಯು ಇನ್ನೊಬ್ಬನೊಡನೆ ಸಂಪರ್ಕದಲ್ಲಿ ಇರುವಳೆಂದು ಸಂದೇಹಿಸಿದ ನಂತರ ಸಂಭೋಗದಲ್ಲಿ ತೊಡಗುವಾಗ ರೋಷದಿಂದ ಹೆಚ್ಚು ರಭಸವನ್ನು ಉಪಯೋಗಿಸುತ್ತಾರೆಂದು ಸರ್ವೇಕ್ಷಣೆಯಿಂದ ಸಿದ್ಧವಾಗಿದೆ.)

★ ದಾಂಪತ್ಯ ಸಮಸ್ಯೆಗಳ ಪರಿಹಾರಕ್ಕೆ 'ಸುಧಾ'ಕ್ಕೆ ಪತ್ರ ಬರೆಯಬಹುದು.

ಉಚಿತ ಸಹಾಯವಾಣಿಗೆ ಪ್ರತಿ ಮಂಗಳವಾರ ಹಾಗೂ ಶುಕ್ರವಾರ ಕರೆಮಾಡಿ. ಲೈಂಗಿಕ ಸಮಸ್ಯೆಗಳಿಗೆ: **8050255229** (3ರಿಂದ 5ರ ತನಕ); ದಾಂಪತ್ಯ ಸಮಸ್ಯೆಗಳಿಗೆ: **8494944888** (ಬೆಳಿಗ್ಗೆ 11ರಿಂದ ಸಂಜೆ 5ರ ತನಕ) ಲೇಖಕರ ವಿಳಾಸ: **www.medisex.org**